**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ ದ ನ್ಯಾದಂ.ರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ.ನಂ. 2779/2022**

ಫಿರ್ಯಾದಿ : ಸರ್ಕಾರದ ಪರವಾಗಿ ಸರಗೂರು ಪೋಲೀಸ್ ಠಾಣೆ

-ವಿರುದ್ಧ-

ಆರೋಪಿ : ರೇವಣ್ಣ
ಬಿನ್ ಸೋಮಣ್ಣ, 66 ವರ್ಷ,
ವಾಸಃ ಚನ್ನಗುಂಡಿಹಾಡಿ ಗ್ರಾಮ,
ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆ,

**ಆಪಾದನೆ**

ಶ್ರೀ ಸಂದೇಶ್ ಪ್ರಭು. ಬಿ., ಬಿ.ಎ(ಲಾ)., ಎಲ್‌ಎಲ್.ಬಿ., ಪಿ ಜಿ ಡಿ ಹೆಚ್ ಆರ್ ಎಂ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಹೆಚ್.ಡಿ.ಕೋಟೆ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ

ದಿನಾಂಕ 20.02.2021 ರಂದು ಮಧ್ಯ 03.30 ಗಂಟೆ ಸಮಯದಲ್ಲಿ ಸರಗೂರು ಪೊಲೀಸ್ ಠಾಣಾ ಸರಹದ್ದು, ಹೆಡಿಯಾಲ-ಚಿಕ್ಕಬರಗಿ ಮುಖ್ಯರಸ್ತೆಯ ಚನ್ನಗುಂಡಿ ಗೇಟ್ ಬಳಿ ಹಾದಿರುವ ರಸ್ತೆಯಲ್ಲಿ ಚಾಸಾ-1 ರವರು ತನ್ನ ಬಾಬ್ತು, ಬೈಕ್ ನಂ.ಕೆ.ಎ-10-ವಿ-1378 ಬಜಾಜ್ ಸಿಟಿ 100 ಬೈಕ್ ನಲ್ಲಿ ನಂಜನಗೂಡು ತಾಲ್ಲೂಕು ಹುರ ಪಕ್ಕದಲ್ಲಿರುವ ಚಿಕ್ಕಚೆನ್ನಪ್ಪ ದೇವಸ್ಥಾನದಲ್ಲಿ ನಡೆದ ಮದುವೆ ಕಾರ್ಯ ಕ್ರಮ ಮುಗಿಸಿಕೊಂಡು ಕು ವರ್ಣೇಗಾಲ ಗ್ರಾಮಕ್ಕೆ ಹೊಗಲು ಚಾಸಾ-2 ರವರನ್ನು ಬೈಕ್ ನ ಹಿಂಭಾಗ ಕೂರಿಸಿಕೊಂಡು ಹೆಡಿಯಾಲ-ಚಿಕ್ಕಬರಗಿ ಮುಖ್ಯರಸ್ತೆಯ ಚನ್ನಗುಂಡಿ ಗೇಟ್ ಬಳಿ ಹಾದಿರುವ ರಸ್ತೆಯ

ಎಡಬದಿಯಲ್ಲಿ ಹೋಗುತ್ತಿದ್ದಾಗ ಅದೇ ಸಮಯಕ್ಕೆ ಎದುರುಗಡೆಯಿಂದ ಬಂದ ಮೇಲ್ಕಂಡ ಆರೋಪಿಯಾದ ನೀವು ನಿಮ್ಮ ಕೆ.ಎ-10-ಇಸಿ-6918 ಹೊಂಡಾ ಶೈನ್ ಬೈಕನ್ನು ಅತಿ ವೇಗ ಮತ್ತು ಅಜಾಗರುಕತೆಯಿಂದ ಓಡಿಸಿಕೊಂಡು ಬಂದು ಚಾಸಾ-1 ರವರ ಬೈಕಿಗೆ ಡಿಕ್ಕಿ ಮಾಡಿ, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 279 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ಮೇಲೆ ಆಪಾಧನೆ ಇದೆ.

ಎರಡನೆಯದಾಗಿ ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಯಾದ ನೀವು ಮೇಲ್ಕಂಡಂತೆ ಅಪಘಾತ ಮಾಡಿದ ಪರಿಣಾಮ ಪರಿಣಾಮ ಚಾಸಾ-1 ಮತ್ತು ಚಾಸಾ-2 ರವರು ಕೆಳಕ್ಕೆ ಬಿದ್ದಾಗ ಚಾಸಾ-1 ರವರಿಗೆ ಮೂಗಿನ ಎರಡು ಕಡೆ ಮೂಳೆಗಳು ಮುರಿದು ತೀವ್ರ ಸ್ವರೂಪದ ಗಾಯವುಂಟಾಗಿ, ಚಾಸಾ-2 ರವರಿಗೆ ತಲೆಗೆ ಮತ್ತು ಬೆನ್ನು ನೋವಾಗಿ ತೀವ್ರಸರೂಪದ ಗಾಯವಾಗಿ, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 338 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ಮೇಲೆ ಆಪಾಧನೆ ಇದೆ.

ಕೊನೆಯದಾಗಿ, ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಮೇಲ್ಕಂಡ ಆರೋಪಿಯಾದ ನೀವು ಯಾವುದೇ ಚಾಲನಾ ಪರವಾನಗಿಯನ್ನು ಹೊಂದದೆ ವಾಹನ ಚಾಲನೆ ಮಾಡಿದ್ದು, ಆ ಮೂಲಕ ಮೇಲ್ಕಂಡ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 3(1) ಸಹವಾಚಕ ಕಲಂ 181 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ಮೇಲೆ ಆಪಾಧನೆ ಇದೆ.

ಈ ಮೇಲಿನ ಆಪಾದನೆಗಳಿಗಾಗಿ ಆರೋಪಿಯಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡತಕ್ಕದ್ದೆಂದು ನಿರ್ದೇಶಿಸಿರುತ್ತೇನೆ.

ಪ್ರಶ್ನೆ : ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ

ಪ್ರಶ್ನೆ : ಈ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ  ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರ

(ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ಆಪಾದನೆಯನ್ನು ಓದಿ ತಿಳಿಸಿ ಹೇಳಲಾಗಿ ಆರೋಪಿಯು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ)

ದಿನಾಂಕಃ

SANDESH PRABHU B
Digitally signed by SANDESH PRABHU B
Date: 2023.11.10 17:22:36 +0530

(ಸಂದೇಶ್ ಪ್ರಭು. ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹೆಚ್.ಡಿ.ಕೋಟೆ